ಅಧ್ಯಕ್ಷರು.—ಲಿಖಿತ ಮೂಲಕ ನೀಡಲಾದ ಪ್ರಶ್ನೆ ಮತು ಉತ್ತರಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

ಅರ್ಜಿಗಳನ್ನು ಒಪ್ಪಿಸುವುದು

(i) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ಈ ಕೆಳಕಂಡ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತೇನೆ.

(೧) ಮಣೂರು ಗ್ರಾಮದ ಹುಂಕಿನ ಕೆರೆಯ ದುರಸ್ತಿ ಬಗ್ಗೆ ಮತ್ತು

(೨) ಮೂದುಗೆಲೆಯೂರು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ಸ್ಥಾಪಿಸುವ ಬಗ್ಗೆ.

ಅಧ್ಯಕ್ಷರು.—ಅರ್ಜಿಗಳನ್ನು ಒಪ್ಪಿಸಲಾಯಿತು.

(ii) ಶ್ರೀ ವಿಜಯಕುಮಾರ್ ಖಂಡ್ರೆ.—ಮಾನ್ಯ ಸಭಾಧ್ಯಕ್ಷರೆ, ಸ್ಪೈಫಂಡರಿ ಪದವೀಧರರ ಮತು ನೇಮಕಾತಿ ಅರ್ಜಿಯನ್ನೆ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರೇ.—ಅರ್ಜಿಯನ್ನು ಒಪ್ಪಿಸಲಾಯಿತು.

(iii) ಶ್ರೀ ಎಸ್. ಎನ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೆ, ಸೋಮೇಶ್ವರ ನೂಲಿನ ಗಿರಣಿಯಲ್ಲಿ ಕೋಟಿಗಟ್ಟಲೆ ನಡೆದಂತಹ ಅವ್ಯವಹಾರದ ಬಗ್ಗೆ ಅರ್ಜಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಅರ್ಜಿಯನ್ನು ಒಪ್ಪಿಸಲಾಯಿತು.

ವರದಿಯನ್ನು ಒಪ್ಪಿಸುವುದು

ಶ್ರೀ ಮಂಜುನಾಥ್ ಸಿ. ಕುನ್ನೂರ್.—ಮಾನ್ಯ ಅಧ್ಯಕ್ಷರೆ, ಅಧೀನ ಶಾಸನ ರಚನಾ ಸಮಿತಿಯ ೨೦ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ದಾಂಡೇಲಿ ವನ್ಯ ಮೃಗ ಧಾಮದ ವ್ಯಾಪ್ತಿಯನ್ನು ಬದಲಾಯಿಸುವ ಬಗ್ಗೆ ನಿರ್ಣಯವನ್ನು...

ಶ್ರೀ ವಾಟಾಳ್ ನಾಗರಾಜ್.—ಈ ನಿರ್ಣಯವನ್ನು ಮಂಡಿಸುವುದು ಬೇಡ. ಇದು ಬಹಳ ಪಾಪದ ಕೆಲಸವನ್ನು ತಾವು ಮಾಡುತ್ತಿದ್ದೀರಿ.

ಅಧಿಕೃತ ನಿರ್ಣಯ

(ದಾಂಡೇಲಿ ವನ್ಯ ಮೃಗಧಾಮದ ವ್ಯಾಪ್ತಿಯನ್ನು ಬದಲಾಯಿಸುವ ಬಗ್ಗೆ)

ಶ್ರೀ ಎಂ. ಪಿ. ಕೇಶವಮೂರ್ತಿ.—ಇದರ ಬಗ್ಗೆ ಚರ್ಚೆ ಆಗಿದೆ.

ಶ್ರೀ ವಾಟಾಳ್ ನಾಗರಾಜ್.—ಈ ಕೆಲಸ ಮಾಡುವುದು ಬೇಡ. ಬಹಳ ಪಾಪದ ಕೆಲಸ ಮಾಡುತ್ತಿದ್ದೀರಿ. ಇದರ ಬಗ್ಗೆ ಸಮಗ್ರ ಚರ್ಚೆ ಆಗಬೇಕು. ಎಲ್ಲಾ ವಿರೋಧ ಪಕ್ಷದವರು ಬಂದ ಮೇಲೆ ಸಮಗ್ರ ಚರ್ಚೆ ಮಾಡೋಣ. ಇದಕ್ಕೆ ಒಂದು ಸಮಿತಿ ಮಾಡೋಣ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ದಾಂಡೇಲಿ ಕಾಡನ್ನು ಸರ್ವನಾಶ ಮಾಡತಕ್ಕದ್ದು, ಈ ನಿರ್ಣಯ ಇದು ಒಳ್ಳೆಯದಲ್ಲ. ಇದರಿಂದ ಒಂದು ಮರ ಉಳಿಯುವುದಿಲ್ಲ. ಅನ್ಯಾಯ ಆಗುತ್ತಿದೆ...

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಚರ್ಚೆಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದರ ಬಗ್ಗೆ ಸಮಗ್ರವಾದ ಚರ್ಚೆ ಆಗಬೇಕು.

ಶ್ರೀ ಎಂ. ಪಿ. ಕೇಶವಮೂರ್ತಿ.—ಚರ್ಚೆ ಆಗಿದೆ.

(ಗೊಂದಲ)

(ಪಕ್ಷೇತರ ಸದಸ್ಯರಾದ ವಾಟಾಳ್ ನಾಗರಾಜ್ ಅವರು, ಬಿಜೆಪಿಯ ಸದಸ್ಯರುಗಳು ಮುಸ್ಲಿಂ ಲೀಗ್ ಸದಸ್ಯರು, ರೈತ ಸಂಘದ ಸದಸ್ಯರುಗಳು ಒಟ್ಟಿಗೆ ಈ ನಿರ್ಣಯ ಮಂಡಿಸುವುದು ಬೇಡ ಎಂದು ಮಾತನಾಡುತ್ತಾ ಸಭಾಧ್ಯಕ್ಷರ ಪೀಠದ ಬಳಿ ಬಂದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇದು ಘಾಪದ ಕೆಲಸ. ಎಲ್ಲಾ ವಿರೋಧ ಪಕ್ಷದವರೂ ಬರಲಿ, ಚರ್ಚೆ ಮಾಡಿದ ನಂತರ ನಿರ್ಣಯ ಆಗಲಿ. ದಯಮಾಡಿ ಮುಂದೆ ಹಾಕಿ.

ಅಧ್ಯಕ್ಷರು.—ನೀವು ಚರ್ಚೆ ಮಾಡಿದ ನಂತರ ನಿರ್ಣಯ ಮಂಡಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಬೇಡ, ನಿರ್ಣಯ ಮಂಡಿಸುವುದಕ್ಕೆ ಆಗವುದಿಲ್ಲ, ಇದು ಒಳ್ಳೆಯ ದಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಚರ್ಚೆ ಆಗಲಿ.

(ಗೊಂದಲ)

(ಒಟ್ಟಿಗೆ ಆಡಳಿತ ಪಕ್ಷದ ಸದಸ್ಯರುಗಳಾದ ಕಾಗೋಡು ತಿಮ್ಮಪ್ಪ, ಮಾನ್ಯ ಸಚಿವರಾದ ರಾಣೆ ಹಾಗೂ ಇತರರು ಮತ್ತು ಪ್ರತಿಪಕ್ಷದ ಪತಿಯಿಂದಲೂ ಒಟ್ಟಿಗೆ ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಹೇಳುವುದು ಸರಿಯಲ್ಲ, ಮಾನ್ಯ ಮಂತ್ರಿಗಳು ನಿರ್ಣಯವನ್ನು ಮೂವ್ ಮಾಡಲಿ.

(ಗೊಂದಲ)

ಅಧ್ಯಕ್ಷರು.—ನೀವು ಚರ್ಚೆ ಮಾಡಿ.

(ಗೊಂದಲ)

ಶ್ರೀ ಎ. ರುಕ್ಮಯ್ಯ ಪೂಜಾರಿ.—ನಿರ್ಣಯ ಮಂಡಿಸುವುದು ಬೇಡ.

(ಗೊಂದಲ)

ಅಧ್ಯಕ್ಷರು.—ಪ್ರಸ್ತಾವನೆ ಮಾಡಲಿ, ನಂತರ ಚರ್ಚೆ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಮೂವ್ ಆಗಲೇ ಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ದಯಮಾಡಿ ಮುಂದಕ್ಕೆ ಹಾಕಿ. ಇದು ದುರಹಂಕಾರದ ಪರಮಾವಧಿ. ಎಲ್ಲಾ ವಿರೋಧ ಪಕ್ಷದವರೂ ಇದ್ದಾಗ ಚರ್ಚೆ ಮಾಡಿದ ನಂತರ ನಿರ್ಣಯ ಆಗಲಿ.

(ಗೊಂದಲ)

(ಪಕ್ಷೇತರ ಸದಸ್ಯರಾದ ವಾಟಾಳ್ ನಾಗರಾಜ್ ಅವರು, ರೈತ ಸಂಘದ ಬಾಬಾಗೌಡ ರುದ್ರಗೌಡ ಪೊ್ರೀ ನಂಜುಂಡಸ್ವಾಮಿ, ಬಿಜೆಪಿಯ ರುಕ್ಮಯ್ಯ ಪೂಜಾರಿ, ನಾರಾಯಣರಾವ್ ಮನಹಳಿ – ಇವರುಗಳು ಸಭಾಧ್ಯಕ್ಷರ ಪೀಠಕ್ಕೆ ಬಂದು ಮನವಿ ಮಾಡುತ್ತಿದ್ದರು ಹಾಗೂ ಸಭೆಯಿಂದ ನಿರ್ಗಮಿಸಿದರು)

(ಗೊಂದಲ)

ಅಧ್ಯಕ್ಷರು.—ಪ್ರಸ್ತಾವನೆ ಮಾಡುವುದರಲ್ಲಿ ತಪ್ಪು ಇಲ್ಲ, ನೀವು ಪ್ರಸ್ತಾವನೆ ಮಾಡಿ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸಭಾಧ್ಯಕ್ಷರ ಪೀಠದತ್ತ ತೆರಳಿ ನಿರ್ಣಯವನ್ನು ಮಂಡಿಸದೆ ವಾಪಸ್ ತೆಗೆದುಕೊಳ್ಳಬೇಕೆಂದು ಕೂಗಿ ಒತ್ತಾಯಿಸುತ್ತಿದ್ದರು)

ಅಧ್ಯಕ್ಷರು.—ಅವರು (ಜನತಾ ದಳ) ಈ ಅಧಿವೇಶನದಲ್ಲಿ ಬರದೆ ಹೋದರೆ ಏನು ಮಾಡುವುದ ಕ್ಕಾಗುತ್ತದೆ? ಸಚಿವರು ಮೊದಲು ಪ್ರಸ್ತಾವನೆ ಮಂಡಿಸಲಿ, ಆನಂತರ, ಬೇಕಾದರೆ ಅದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ,

(ಗೊಂದಲ)

ಅಧ್ಯಕ್ಷರು.—ಈಗ ಪ್ರಸ್ತಾವನೆ ಮಂಡಿಸುವುದಕ್ಕೆ ಸಚಿವರಿಗೆ ನಾನು ಹೇಳಿದ್ದೇನೆ. ಈಗ ತಾವು ಮಂಡಿಸಬಹುದು.

(ಈ ಸಂದರ್ಭದಲ್ಲಿ ಸಭಾಧ್ಯಕ್ಷರ ಕ್ರಮವನ್ನು ವಿರೋಧಿಸಿ. ಸದಸ್ಯರಾದ ಶ್ರೀ ಪಾಟೀಳ್ ನಾಗರಾಜ್‌ರವರು ತಮಗೆ ಒದಗಿಸಿದ್ದ ನಿರ್ಣಯದ ಪ್ರತಿಯನ್ನು ಸದನದಲ್ಲಿ ಹರಿದು ಬಿಸಾಡಿದರು ಮತ್ತು ರೈತ ಸಂಘದ ಪ್ರೊ॥ ನ ಜುಂಡಸ್ವಾಮಿ, ಬಾಬಾಗೌಡ ರುದ್ರಗೌಡ ಪಾಟೀಲ್, ಭಾರತೀಯ ಜನತಾ ಪಕ್ಷದ ಸದಸ್ಯರುಗಳಾದ ರುಕ್ಮಯ್ಯ ಪೂಜಾರಿ, ನಾರಾಯಣರಾವ್ ಮನಹಳ್ಳಿ, ವಾಟಾಳ್ ನಾಗರಾಜ್ ಮತ್ತು ಮುಸ್ಲಿಂ ಲೀಗ್‌ನ ಸದಸ್ಯರುಗಳಾದ ಇಸ್ಮಾಂಲರವರು ಸಭಾತ್ಯಾಗ ಮಾಡಿದರು)

(ಗೊಂದಲ, ಸಭಾತ್ಯಾಗಗಳ ನಡುವೆ ಸಚಿವರು ನಿರ್ಣಯ ಮಂಡಿಸಿದರು)

† **ಶ್ರೀ ಎಂ. ಪಿ. ಕೇಶವಮೂರ್ತಿ** (ಅರಣ್ಯ ಖಾತೆ ರಾಜ್ಯ ಸಚಿವರು).—ನಾನು ಈ ಕೆಳಕಂಡ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ :

ಅಧಿಕೃತ ನಿರ್ಣಯ

"ಕರ್ನಾಟಕ ಸರ್ಕಾರವು ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, ೧೯೭೨ ರ (೧೯೭೨ ರ ಕೇಂದ್ರ ಅಧಿನಿಯಮ ೫೩) ೨೬ಎ ಪ್ರಕರಣದ (೩) ನೇ ಉಪ–ಪ್ರಕರಣದಡಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಹೊರಡಿಸಲು ಉದ್ದೇಶಿಸಿರುವ ಈ ಕೆಳಗಿನ ಕರಡು ಅಧಿಸೂಚನೆಯನ್ನು ಸದನವು ಈ ಮೂಲಕ ಅನುಮೋದಿಸಲು ನಿರ್ಣಯಿಸಿದೆ."

"ಅಧಿಸೂಚನೆ"

ಕರ್ನಾಟಕ ಸರ್ಕಾರವು ದಿನಾಂಕ ೩೧ನೇ ಆಗಸ್ಟ್ ೧೯೮೭ ನೇ ಸೆಪ್ಟೆಂಬರ್ ೧೯೮೭ ರ ಅಧಿಸೂಚನೆ ಸಂಖ್ಯೆ ಎಸ್‌ಎನ್‌ಡಿ ೧೫೦ ಎಸ್‌ಡಬ್ಲ್ಯೂಎಲ್ ೮೧ ರಲ್ಲಿ, ಅನುಸೂಚಿಯಲ್ಲಿ ೮೩, ೪೧೫, ೭೧೨ ಹೆಕ್ಟೇರು ಗಳು ಅಥವಾ ೪೫೪ ಎಕರೆಗಳು ೧೫೭ ಚದರ ಕಿಲೋಮೀಟರುಗಳ ವಿಸ್ತೀರ್ಣವೆಂಬುದಾಗಿ ನಿರ್ದಿಷ್ಟಪಡಿಸಿರುವ ಸ್ಥಳ ಮತ್ತು ಪರಿಮಿತಿಗಳನ್ನು ಹೊಂದಿರುವ ಪ್ರದೇಶವನ್ನು "ಚಾಂಡೇಲಿ ವನ್ಯಜೀವಿ ಅಭಯಾರಣ್ಯ" ಎಂಬುದಾಗಿ ಘೋಷಿಸಿರುವುದರಿಂದ :

ಮತ್ತು ಕಾಳೀ ಜಲವಿದ್ಯುತ್ ಯೋಜನೆ, ಗಣಿ ಕೈಗಾರಿಕೆಗಳು, ಅಂಬಿಕಾನಗರ ಎಂಬ ಹೊಸ ಪಟ್ಟಣ ಮತ್ತು ಪೇಪರ್ ಹೌಸ್ ನಿರ್ಮಾಣಗಳು, ಸೂಪಾ ತಾಲ್ಲೂಕಿನ ಮುಳುಗಡೆ, ಜಾಯಿಪಾನಲ್ಲಿ ಹೊಸ ತಾಲ್ಲೂಕು ಕೇಂದ್ರ ಸ್ಥಾನದ ಸ್ಥಾಪನೆ ಮತ್ತು ಘೋಷಿತ ಅಭಯಾರಣ್ಯ ಪರಿಮಿತಿಗಳೊಳಗೆ ವಿಸ್ತರಿಸಿರುವ ದೊಡ್ಡ ಪ್ರಮಾಣದ ವಾಸ ಸ್ಥಳ ಇವುಗಳ ಕಾರಣದಿಂದಾಗಿ ಉಂಟಾದ ತೊಂದರೆಗಳ ದೃಷ್ಟಿಯಿಂದ ಚಾಂಡೇಲಿ ವನ್ಯಜೀವಿ ಅಭಯಾರಣ್ಯದ ಪರಿಮಿತಿಗಳನ್ನು ಮತ್ತು ಸರಹದ್ದುಗಳನ್ನು

† ಈ ಚಿಪ್ಪಿ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಬದಲಾಯಿಸುವುದು ಅವಶ್ಯಕವೆಂದು ಕರ್ನಾಟಕ ಸರ್ಕಾರವು ಪರಿಗಣಿಸಿರುವುದರಿಂದ ಮತ್ತು ವನ್ಯಜೀವಿ ಆಥವಾ ಅವರ ಪರಿಸರವನ್ನು ಸಂರಕ್ಷಿಸುವ. ಸಂತಾನಾಭಿವೃದ್ಧಿ ಮಾಡುವ ಅಥವಾ ಬೆಳೆಸುವ ಉದ್ದೇಶ ಕ್ಕಾಗಿ ಜೀವಿ ಪರಿಸರ ಶಾಸ್ತ್ರ, ಪ್ರಾಣಿವರ್ಗ, ಸಸ್ಯವರ್ಗ, ಭೂ ಆಕೃತಿ ರಚನಾ ಶಾಸ್ತ್ರ, ನೈಸರ್ಗಿಕ ಆಥವಾ ಪ್ರಾಣಿ ಶಾಸ್ತ್ರದ ದೃಷ್ಟಿಯಿಂದ ಸಾಕಷ್ಟು ಮಹತ್ವವುಳ್ಳಂಥ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಸ್ಥಳ ಮತ್ತು ಪರಿಮಿತಿಗಳನ್ನು ಹೊಂದಿರುವ ಪ್ರದೇಶವನ್ನು ಅಭಯಾರಣ್ಯ ವೆಂದು ಬದಲಾಯಿಸಿ ಘೋಷಿಸುವುದು ಅಪೇಕ್ಷಣೀಯವೆಂದು ಕಂಡುಬಂದಿರುವುದರಿಂದ.

ಈಗ, ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, ೧೯೭೨ ರ (೧೯೭೨ರ ಕೇಂದ್ರ ಅಧಿನಿಯಮ ೫೩) ೨೬ ಎ ಪ್ರಕರಣದ (೩) ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಸ್ಥಳ ಮತ್ತು ಪರಿಮಿತಿ ವಿಸ್ತೀರ್ಣವನ್ನು ಹೊಂದಿರುವ ಪ್ರದೇಶವನ್ನು "ಚಾಂಡೇಲಿ ವನ್ಯಜೀವಿ ಅಭಯಾರಣ್ಯ" ವೆಂದು ಈ ಮೂಲಕ ಬದಲಾಯಿಸಿ ಘೋಷಿಸಿದೆ.

ಅನುಸೂಚಿ

ಜಿಲ್ಲೆಯ ಹೆಸರು : ಉತ್ತರ ಕನ್ನಡ

ಪ್ರದೇಶ : ೪೭೫೧೧.೮೫ ಹೆಕ್ಟೇರುಗಳು ಅಥವಾ ೪೭೫.೧೧೮೮ ಚದರ ಕಿಲೋಮೀಟರುಗಳು.

ಸರಹದ್ದಿನ ವಿವರಣೆ

ಉತ್ತರ :— ಇತರ ಸರಹದ್ದು, ಅನ್‌ಮೋಡ್, ಅನ್‌ಷಿ ಮತ್ತು ಉಳವಿ ಅರಣ್ಯಗಳ ಕಾರ್ಯಯೋಜನೆಯ X ಮತ್ತು XII ವಿಭಾಗ ಸಂಖ್ಯೆಗಳ ಕೂಡು ಜಾಗದಲ್ಲಿ ಗೋವಾ ರಾಜ್ಯ ಸರಹದ್ದಿನಿಂದ ಪ್ರಾರಂಭವಾಗಿ, ಪೂರ್ವದ ಕಡೆಗೆ ತಿರುಗಿ, ಅನ್‌ಮೋಡ್, ಅನ್‌ಷಿ ಮತ್ತು ಉಳವಿ ಅರಣ್ಯಗಳ ಸಾಮಾನ್ಯ ವಿಭಾಗ ಸರಹದ್ದಿನ X, XI ಮತ್ತು XII, XIII ವಿಭಾಗಗಳುದ್ದಕ್ಕೂ ಸಾಗಿ ಸಾಮಾನ್ಯ ಸರಹದ್ದಿನ ೧೭, ೧೮, ೧೪, ೧೩ಎ, ೧೩ಬಿ ಮತ್ತು ೧೯ನೇ ಉಪ-ವಿಭಾಗಗಳುದ್ದಕ್ಕೂ ಹೋಗುತ್ತದೆ. ಅನಂತರ ಹಳಿಯಾಳ ಮಹಾರಣ್ಯಗಳ ವಿಭಾಗ ಸರಹದ್ದಿನ I ವಿಭಾಗದುದ್ದಕ್ಕೂ ಸಾಗಿ, ಮುಂದೆ ಸಾಮಾನ್ಯ ಸರಹದ್ದಿನ ೧೯, ೨೧ ಮತ್ತು ೧೫ನೇ ಭಾಗದುದ್ದಕ್ಕೂ ಹೋಗುತ್ತದೆ. ಇಲ್ಲಿಂದ ಮುಂದೆ ಸರಹದ್ದು ಉತ್ತರ ದಿಕ್ಕಿನೆಡೆ ತಿರುಗಿ ಶಿಲ್ಲಾ-ಹಟ್ಟೋಳಿ ರಸ್ತೆಯುದ್ದಕ್ಕೂ ಸಾಗಿ, ಪಟ್ಟೋಳಿ ಸಮೀಪದ ಕೂಡು ರಸ್ತೆಯವರೆಗೆ ಬಂದು, ಮುಂದೆ ವಿಠನೋಳಿ ಮತ್ತು ಕುಳಗಿಯ ಮೂಲಕ ಪಟ್ಟೋಳಿ-ಜೊಮ್ಮನಹಳ್ಳಿ ರಸ್ತೆಯುದ್ದಕ್ಕೂ ಸಾಗಿ, ಕಾಳೀ ನದಿಯ ಒಡ್ಡು ದಾರಿಯವರೆಗೆ ಬಂದು, ಜೊಮ್ಮನಹಳ್ಳಿಯ ಸಮೀಪ ಕಾಳೀ ನದಿಯನ್ನು ಹಾದು ಹೋಗುತ್ತದೆ.

ಪೂರ್ವ :—ಅನಂತರ ಸರಹದ್ದು ಕಾಳೀ ನದಿಯ ಜಲದಂಡೆಯ ಕೆಳ-ಪ್ರವಾಹದುದ್ದಕ್ಕೂ ಸಾಗಿ ಹಟ್ಟಿಹಳ್ಳ ನಾಲೆಯು ಕಾಳೀ ನದಿಯನ್ನು ಕೂಡುವ ಜಾಗದವರೆಗೆ ಬಂದು, ಅಲ್ಲಿಂದ ಮುಂದೆ ಉಕ್ಕೈ ಹಳ್ಳವು ಕಾಳೀ ನದಿಯನ್ನು ಸೇರುವ ಜಾಗದಲ್ಲಿರುವ ಸುಳಗೇರಿ ಗ್ರಾಮದ ಸಮೀಪದ ಥಾನಿಲ್ ಸರಹದ್ದಿನ (ಕಾಳೀ ನದಿಯ ಕೆಳ-ಪ್ರವಾಹದುದ್ದಕ್ಕೂ ಸಹ) ಸಾಗುತ್ತದೆ.

ದಕ್ಷಿಣ :—ಉಕ್ಕೈಹಳ್ಳವು ಎಲ್ಲಿ ಕಾಳೀನದಿಯನ್ನು ಸೇರುತ್ತದೋ ಅಲ್ಲಿಂದ ಸರಹದ್ದು ಪ್ರಾರಂಭವಾಗಿ, ಉಕ್ಕೈಹಳ್ಳ ವೇಲಾ ಪ್ರವಾಹದುದ್ದಕ್ಕೂ ಸಾಗಿ, ಕಡತಹಳ್ಳಿ ಗ್ರಾಮದ ರಸ್ತೆಯು ಉಕ್ಕೈಹಳ್ಳವನ್ನು ದಾಟುವ ಜಾಗದವರೆಗೆ ಸಾಗಿ, ಸುಳಗೇರಿ ಕಡತಹಳ್ಳಿ ಗ್ರಾಮದ ರಸ್ತೆಯುದ್ದಕ್ಕೂ ಸಾಗಿ, ಉಳವಿ ಗ್ರಾಮದವರೆಗೆ ಬರುತ್ತದೆ. ಅನಂತರ ಸರಹದ್ದು ಉಳವಿ-ಕುಂಜಾರವಾಡ ರಸ್ತೆಯುದ್ದಕ್ಕೂ ಸಾಗಿ, ಮುಂದೆ ಕನೇರಿ ನದಿ ಹರಿಯುವ ಜಾಗದವರೆಗೆ ಬಂದು, ಕನೇರಿ ನದಿಯ ಮೇಲಾ ಪ್ರವಾಹದುದ್ದಕ್ಕೂ ಸಾಗುತ್ತದೆ. ಅಲ್ಲಿಂದ ಮುಂದೆ ಇದು ಕುಂಜಾರವಾಡ-ಕಾರವಾರ ರಸ್ತೆಗೆ ಸೇರಿ, ಅಲ್ಲಿಂದ ಮುಂದೆ ಕುಡಾಳ ಗ್ರಾಮದುದ್ದಕ್ಕೂ ಸಾಗಿ ಗೋವಾ ರಾಜ್ಯದ ಸರಹದ್ದಿನವರೆಗೆ ಹೋಗುತ್ತದೆ.

ಪಶ್ಚಿಮ :—ಸರಹದ್ದು, ಗೋವಾ ರಾಜ್ಯದ ಸರಹದ್ದಿನ್ನುದ್ದಕ್ಕೂ ಸಾಗಿ ಪ್ರಾರಂಭದ ಜಾಗದ ವರೆಗೆ ಸಾಗುತ್ತದೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಆ ಭಾಗದಲ್ಲಿರತಕ್ಕ ವನ್ಯಮೃಗಗಳನ್ನು ಸಂರಕ್ಷಣೆ ಮಾಡುವುದಕ್ಕೋಸ್ಕರ ೧೯೫೭ ಮತ್ತು ೧೯೭೫ರಲ್ಲಿ ಪ್ರದೇಶವನ್ನು ವಿಸ್ತರಿಸಲಾಯಿತು. ತದನಂತರ, ಅಲ್ಲಿ ಕಾಳಿ ಜಲ ವಿದ್ಯುತ್ ಯೋಜನೆ ಬಂದ ನಂತರ ಕಾಳಿ ನದಿ ಯೋಜನೆಯಿಂದ ಅಲ್ಲಿನ ಪ್ರದೇಶ ಮುಳುಗಡೆಯಾಗಿ ಜನರಿಗೆ ತೊಂದರೆಯಾಗುತ್ತದೆಂದು ಹೊಸದಾಗಿ ಜೊಯ್ಡಾ ತಾಲ್ಲೂಕು ಕೇಂದ್ರವನ್ನು ಪ್ರಾರಂಭಿಸಿದಾಗ ಅಲ್ಲಿರುವ ಸಾವಿರಾರು ಗ್ರಾಮಗಳಲ್ಲಿ ಶಾಸನಸತಕ್ಕಂಥ ಜನರಿಗೆ ಸೌಲಭ್ಯ-ಸವಲತ್ತುಗಳನ್ನು ಕೊಡಬೇಕಾದುದರಿಂದ ಆ ಭಾಗದ ಶಾಸಕರುಗಳು ಹಾಗೂ ಸಾರ್ವಜನಿಕರು ಮಾರ್ಚ್, ೯೩ರಲ್ಲಿ ನಮ್ಮಲ್ಲಿಗೆ ಬಂದು ಬಿನ್ನಹ ಮಾಡಿಕೊಂಡಾಗ ನಾನು ಶಾಸಕರುಗಳೆ ಜೊತೆ ಚರ್ಚೆ ಮಾಡಿದೆ. ಈ ಅಭಯಾರಣ್ಯದಿಂದಾಗಿ ಜನರು ಅಲ್ಲಿಗೆ ಹೋಗುವುದಕ್ಕಾಗಲಿ ಅಥವಾ ಸಾಕುಪ್ರಾಣಿಗಳು ಹೋಗುವುದಕ್ಕಾಗಲಿ ಅಥವಾ ಒಂದು ಬಾಣಲೆಯಲ್ಲಿ ಮಾರಳನ್ನು ತರಬೇಕಾದರೂ ತುಂಬಾ ತೊಂದರೆಯಾಗಿದೆಯೆಂದು ಮತ್ತು ಈ ಅಭಯಾರಣ್ಯದ ಗಡಿ ಪ್ರದೇಶ (ಬೌಂಡರಿ) ಏನಿದೆ, ಇದನ್ನು ಸ್ವಲ್ಪ ಕಡಿಮೆ ಮಾಡಿದರೆ ಜನರು ಓಡಾಡುವುದಕ್ಕೆ ಅನುಕೂಲ ಹಾಗಾಗುತ್ತದೆಂದು ಬಿನ್ನವಿಸಿಕೊಂಡಾಗ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಜುಲೈ ತಿಂಗಳಿನಲ್ಲಿ ಹುಂದು ಸಭೆಯನ್ನು ಕರೆದು, ಆ ಪ್ರದೇಶದಲ್ಲಿ ಎಷ್ಟು ಭಾಗ ಕಡಿಮೆ ಮಾಡಬಹುದೆಂಬುದರ ಬಗ್ಗೆ ಒಂದು ನಕ್ಷೆ ತಯಾರಿಸಿಕೊಂಡು ಬರಬೇಕೆಂದು ನಮ್ಮ ಅರಣ್ಯಾಧಿಕಾರಿಗಳಿಗೆ ಹೇಳಿ ಕಳುಹಿಸಿದೆವು. ಅಲ್ಲಿ ಸಾವಿರಾರು ಗ್ರಾಮಗಳಿದ್ದು, ಕಾಳಿ ನದಿ ಯೋಜನೆ ಬಂದಂಥ ಸಂದರ್ಭದಲ್ಲಿ ಅನೇಕ ಗ್ರಾಮಗಳು ಮುಳುಗಡೆಯಾಗಿವೆ ಮತ್ತು ಸಾವಿರಾರು ಎಕರೆ ಪ್ರದೇಶಗಳು ಕೂಡ ಮುಳುಗಡೆಯಾಗಿರುವ ಪ್ರಯುಕ್ತ ಹುದ್ದೆ ಇರತಕ್ಕಂಥ ದಾಂಡೇಲಿ ಅರಣ್ಯ ಪ್ರದೇಶವೇನಿದೆ, ಮತ್ತು ನಮ್ಮನ್ನು ಪುನಃ ಸ್ಥಳಾಂತರಿಸಬಹುದೆನ್ನುವ ತಂಕೆ ಜನರಲ್ಲಿ ಬಂದು ಹೇಳಿದಾಗ ನಾವು ಅದನ್ನು ಪರಿಶೀಲಿಸಿ ಆ ಜನರಿಗೆ ಅನುಕೂಲ ಹಾಗತಕ್ಕಂಥ ಮತ್ತು ಹೊಸ ನಗರ ಏನು ಪ್ರಾರಂಭವಾಗಿದೆ, ಅದರ ಅಭಿವೃದ್ಧಿಗೋಸ್ಕರ ಕೆಲವು ಭಾಗಜನ್ನು 'ಕಾಯ್ದಿಟ್ಟ ಅರಣ್ಯ'ವೆಂದು ಮಾಡುತ್ತಿದ್ದೇವೆ. ಕೇವಲ ದಾಂಡೇಲಿ ಅಭಿಯಾರಣ್ಯದ ಗಡಿ ಪ್ರದೇಶವೇನಿದೆ, ಅದನ್ನು ಕಡಿಮೆ ಮಾಡುವುದರಿಂದ ಅರಣ್ಯ ನಾಶವಾಗುವುದಿಲ್ಲ. ಅದಕ್ಕೆ ಬದಲಾಗಿ ಸೀಮಿತವಾಗಿ ಉಳಿಕೆ ಚದರ ಕಿಲೋಮೀಟರ್ ಪ್ರದೇಶವೇನಿದೆ, ಅದನ್ನು ೪೭೫ ಚದರ ಕಿಲೋಮೀಟರ್ ಪ್ರದೇಶಕ್ಕೆ ಕಡಿಮೆ ಮಾಡಿ ಅದನ್ನು 'ಕಾಯ್ದಿಟ್ಟ ಅರಣ್ಯ ಪ್ರದೇಶವೆಂದು ಹೂಡಿದ್ದೇವೆ. ಆ ಪ್ರದೇಶದಲ್ಲಿ ಮರ ಕಡಿಯುವುದಕ್ಕಾಗಲಿ ಮತ್ತೊಂದು ಮಾಡುವುದಕ್ಕಾಗಲಿ ಅವಕಾಶವಿಲ್ಲ. ಆದರೆ, ಅಲ್ಲಿ ವಿದ್ಯುತ್ ಸಂಪರ್ಕ ಎಳೆಯಬೇಕಾದರೆ, ಶಾಲಾ ಕಟ್ಟಡ ಕಟ್ಟಬೇಕಾದರೆ ಅಥವಾ ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಬೇಕಾದರೆ ಅನುಮತಿ ಪಡೆದುಕೊಳ್ಳದೆ ಆಗುವುದಿಲ್ಲ. ಉತ್ತರ ಕನ್ನಡ ಜಿಲ್ಲೆ ಶೇಕಡ ಐಂಬತ್ತರಷ್ಟು ಅರಣ್ಯ ಪ್ರದೇಶವಾಗಿರುವುದರಿಂದ ಅಲ್ಲಿನ ಸಾರ್ವಜನಿಕರು ಮತ್ತು ಸ್ಥಳೀಯ ಮುಖಂಡರುಗಳು ಕೂಡ ಒತ್ತಡ ತಂದಿದ್ದರಿಂದ ಸದನ ನಿರ್ಣಯವನ್ನು ಸದನದ ಮುಖಾಂತರ ತರುತ್ತಿದ್ದೇನೆ. ಕಾನೂನು ರೀತ್ಯಾ ಈ ಸದನ ಮತ್ತು ಹೋಲ್ಮನೆ ಎರಡೂ ಸದನಗಳು ಅನುಮತಿ ಕೊಡಬೇಕೆಂದು, ಅಲ್ಲದೆ, ಸ್ವಾತಂತ್ರ್ಯ ಪೂರ್ವದಿಂದಲೂ ಅಲ್ಲಿ ಕೆಲವೊಂದು ಕೋಟ್ಯಾಂತರ ರೂಪಾಯಿಗಳ ಬಂಡವಾಳ ಹೂಡಿ ಗಣಿ ಕೈಗಾರಿಕೆಗಳನ್ನು ನಡೆಸುತ್ತಿದ್ದು, ಈಗ ಅಭಿಯಾರಣ್ಯವಾಗಿರುವುದರಿಂದ ಅವರ ವಾಹನಗಳು ಓಡಾಡುವುದಕ್ಕೆ ತುಂಬಾ ತೊಂದರೆ ಆಗುತ್ತಿದ್ದು ಮತ್ತು ಅಲ್ಲಿರತಕ್ಕ ಜನರು ಅಭಯಾರಣ್ಯದಲ್ಲಿ ಓಡಾಡುವುದಕ್ಕೂ ಅನುಮತಿ ಕೊಡುತ್ತಿಲ್ಲವಾದ್ದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ದಾಂಡೇಲಿ ವನ್ಯಮೃಗ ಧಾಮದ ಹ್ಯಾಪ್ತಿಯನ್ನು ಕಡಿಮೆ ಮಾಡುವ ಉದ್ದೇಶವಿದೆಯೇ ಹೊರತು ಅರಣ್ಯ ನಾಶ ಮಾಡುವುದಕ್ಕಾಗಲಿ ಅಥವಾ ಮತ್ತೊಂದಕ್ಕಾಗಲಿ ಆಗಿಲ್ಲ. ಅರಣ್ಯವನ್ನು ಉಳಿಸುವುದಕ್ಕೆ ಮತ್ತು ಬೆಳೆಸುವುದಕ್ಕೆ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಈ ನಿರ್ಣಯವನ್ನು ತರುತ್ತಿದ್ದೇನೆ. ಆದುದರಿಂದ, ಹರ್ಷವಿಟ್ಟು ಈ ನಿರ್ಣಯವನ್ನು ಮಾನ್ಯ ಸದಸ್ಯರೆಲ್ಲರೂ ಬೆಂಬಲಿಸಿ ಅಂಗೀಕರಿಸುವುದಕ್ಕೆ ಅನುಮತಿ ಕೊಡಬೇಕೆಂದು ತಮ್ಮ ಮುಖಾಂತರ ಬೇಡಿಕೊಳ್ಳುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿರತಕ್ಕಂಥ ಈ ನಿರ್ಣಯ ಆ ಪ್ರದೇಶದ ಮತ್ತು ಆ ಜಿಲ್ಲೆಯ ವಸ್ತುಸ್ಥಿತಿಗೆ ತೀರಾ ಅಗತ್ಯವಾಗಿ ಆಗಬೇಕಾಗಿದೆ. ದಾಂಡೇಲಿ ವನ್ಯಮೃಗ ಧಾಮ ಮತ್ತು ಅದರ ಸುತ್ತಮುತ್ತಲಿನ ಪ್ರದೇಶ ತಮಗೆ ಬಹಳ ಚೆನ್ನಾಗಿ ಗೊತ್ತಿದೆ. ಇದು ಆದ ನಂತರ, ಈ ಸ್ಥಳವನ್ನು ಸರ್ಕಾರದವರು ವನ್ಯ ಜೀವಿ ಸಂರಕ್ಷಣ ಕ್ಷೇತ್ರವೆಂದು ಘೋಷಣೆ ಮಾಡಿದ ನಂತರ, ಆ ರೀತಿ ಆ ಪ್ರದೇಶವನ್ನು ಪರಿವರ್ತನೆ ಮಾಡಿದ ನಂತರ ಅಲ್ಲಿ ಅನೇಕ ಕಟ್ಟಡಗಳು ಆಗಿದೆ, ಅಲ್ಲಿ ಊರು ಬಂದಿದೆ, ಶಾಲೆ ಬಂದಿದೆ. ಅಲ್ಲಿ ಕಾಳಿ ಜಲವಿದ್ಯುತ್ ಯೋಜನೆ ಬಂದಿದೆ. ಆ ರೀತಿ ಕಟ್ಟಡಗಳು ಮತ್ತು ಆ ಪ್ರಾಜೆಕ್ಟ್ ಆದನಂತರ ಅಲ್ಲಿ ವಾಸ್ತವಿಕವಾಗಿ ಕೆಲವು ನೈತಿಕವಾದಂಥ ಬದಲಾವಣೆಯಾಗಿದೆ. ಆ ಬದಲಾವಣೆಗಳಿಗೆ ತಕ್ಕಂತೆ ನಾವು ಅದನ್ನು ಪರಿವರ್ತನೆ ಮಾಡಿಕೊಳ್ಳದಿದ್ದರೆ ಅಲ್ಲಿರತಕ್ಕ ಜನರಿಗೆ ಜೀವನ ಮಾಡುವುದು ತುಂಬಾ ಕಷ್ಟವಾಗುತ್ತದೆ, ತೊಂದರೆಯಾಗುತ್ತದೆ. ಅಲ್ಲಿ ಈಗ ಒಂದು ಶಾಲೆಯನ್ನು ಕಟ್ಟಲು ಆಗುತ್ತಿಲ್ಲ. ಊರಿಗೆ ಏನಾದರು ಸೌಲಭ್ಯವನ್ನು ಮಾಡಲು ಆಗುತ್ತಿಲ್ಲ. ಅಲ್ಲಿ ಬಂದಿರುವ ಜಲ ವಿದ್ಯುತ್ ಗಾರಕ್ಕೆ ಬೇಕಾದಂಥ ಭೂಮಿಯನ್ನು ತೆಗೆದುಕೊಳ್ಳಲು ಆಗುತ್ತಿಲ್ಲ. ಆ ಪ್ರದೇಶದಲ್ಲಿ ಗೌಳಿ ಎನ್ನತಕ್ಕ ಜನಾಂಗದ ಅನೇಕ ಜನರು ಇವತ್ತು ಹೆಚ್ಚಾಗಿ ಎಮ್ಮೆಗಳನ್ನು ಸಾಕಿ ಹಾಲನ್ನು ಕರೆದು ಜೀವನ ಮಾಡತಕ್ಕ ವರ್ಗಕ್ಕೆ ಸೇರಿದ್ದಾರೆ ಅವರುಗಳು ಆ ಬೆಟ್ಟಗುಡ್ಡಗಳಲ್ಲೇ ಜೀವನ ಮಾಡಿಕೊಂಡು ಬಂದಿದ್ದಾರೆ. ಆದರೆ ಅವರುಗಳು ಈಗ ಅರಣ್ಯದೊಳಗೆ ಪ್ರವೇಶ ಮಾಡುವಂತಿಲ್ಲ. ಈ ಒಂದು ಕಾನೂನು ಬಂದ ನಂತರ ಅಲ್ಲಿನ ಜನರು ಯಾವುದೇ ಸಣ್ಣಪುಟ್ಟ ಕೆಲಸಕ್ಕೂ ಅರಣ್ಯದೊಳಕ್ಕೆ ಹೋದರೆ ಅರಣ್ಯ ಇಲಾಖೆಯ ಅಧಿಕಾರಿಗಳು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಚೆನ್ನಾಗಿ ಇರತಕ್ಕ ಆ ಪ್ರದೇಶವನ್ನು ಹಾಗೆಯೇ ಉಳಿಸಿಕೊಂಡು ಹೋಗಬೇಕು ಎನ್ನತಕ್ಕ ಒತ್ತಾಯ ಮತ್ತು ಬೇಡಿಕೆ ಬಹಳ ದಿನಗಳಿಂದ ಇತ್ತು. ಇವತ್ತು ಆವೆಲ್ಲವನ್ನು ಪರಿಶೀಲನೆ ಮಾಡಿ ಈ ಒಂದು ನಿರ್ಣಯವನ್ನು ತಂದಿದ್ದಾರೆ. ಈ ನಿರ್ಣಯವನ್ನು ತಂದಕೂಡಲೆ ವಿರೋಧ ಪಕ್ಷದವರು ಏನೋ ಬಹಳ ಇದರಲ್ಲಿ ಲೂಟಿ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ, ಏನೋ ಬಹಳ ಲಾಭವನ್ನು ಮಾಡಿಕೊಳ್ಳಲು ಇವರು ಮಾಡಿದ್ದಾರೆ ಎನ್ನತಕ್ಕ ಅಭಿಪ್ರಾಯವು ಮೂಡಿರುವ ರೀತಿಯಲ್ಲಿ ಮಾತನಾಡಿದ್ದಾರೆ. ನಾನಾದರೂ ಪ್ರೊ; ನಂಜುಂಡಸ್ವಾಮಿಯವರು, ಈ ನಿರ್ಣಯ ಆದನಂತರ ಇದರ ಬಗ್ಗೆ ಇಲ್ಲಿ ಚರ್ಚೆಯಾಗಲಿ, ಆ ರೀತಿ ಚರ್ಚೆಯಾಗಿ ಅವರು ಹೇಳುವುದರಲ್ಲಿ ಏನಾದರು ವಾಸ್ತವಿಕ ಅಂಶ, ಸತ್ಯವಾದ ಅಂಶ ಇದ್ದರೆ ಅದಕ್ಕೆ ಖಂಡಿತವಾಗಿ ನಾವು ಧ್ವನಿಯನ್ನು ಗೂಡಿಸಲು ತಯಾರಾಗಿದ್ದೇವೆಂದು ಹೇಳುತ್ತೇನೆ. ಏಕೆಂದರೆ, ಅವರ ತಲೆಯಲ್ಲಿ ಏನು ವಿಷಯವಿದೆ ಎನ್ನತಕ್ಕದನ್ನು ನಾವು ತಿಳಿದುಕೊಳ್ಳಬೇಕು. ನಮಗೆ ಅಲ್ಲಿನ ವಾಸ್ತವಿಕ ಸ್ಥಿತಿ ಮತ್ತು ಜನರು ಕಷ್ಟಪಡುತ್ತಿರತಕ್ಕದ್ದನ್ನು ನೋಡಿದಾಗ ನಮಗೆ ಏನು ಅನ್ನಿಸಿದೆ ಎನ್ನುವುದನ್ನು ನಾವು ಹೇಳಬೇಕಾಗುತ್ತದೆ. ಏಕೆಂದರೆ ಅಲ್ಲಿ ನಿಜವಾಗಿಯೂ ಉತ್ತಮವಾದಂಥ ಅರಣ್ಯ ಪ್ರದೇಶ ಈಗಲೂ ಸಹ ಇದೆ. ಅದನ್ನು ಉಳಿಸಿಕೊಳ್ಳಬೇಕು. ಯಾರೋ ಕೈಗಾರಿಕೋದ್ಯಮಿಗಳಿಗೋ, ಇನ್ನೊಬ್ಬರಿಗೋ ಲಾಭವನ್ನು ಮಾಡಿಕೊಟ್ಟು ಅಲ್ಲಿರತಕ್ಕ ಅರಣ್ಯವು ಲೂಟಿಯಾಗಬೇಕೆಂದು ನಾವುಗಳು ಖಂಡಿತವಾಗಿ ಹೇಳುವುದಿಲ್ಲ. ಏನೋ ಆ ಕಾಲದಿಂದಲೂ ಆ ಅರಣ್ಯವನ್ನು ರಕ್ಷಣೆ ಮಾಡಿಕೊಂಡು ಬಂದಿರುವ ಕಾರಣಕ್ಕಾಗಿ ಅಲ್ಲಿ ಒಳ್ಳೆಯ ವನ ಸಂಪತ್ತು, ಅರಣ್ಯ ಸಂಪತ್ತು ಈಗಲೂ ಕೂಡ ಇದೆ. ಅದನ್ನು ನಾವು ಉಳಿಸಿಕೊಳ್ಳಬೇಕು. ಅವರು ಹೇಳುವಂತೆ ಯಾವುದಾದರೊಂದು ಪ್ರದೇಶ, ಊರಿನಲ್ಲಿ ನಾವು ಏನಾದರೂ ಅನಾವಶ್ಯಕವಾಗಿ ಯಾರಿಗೋ ಲಾಭವನ್ನು ಮಾಡಿಕೊಡತಕ್ಕ ದೃಷ್ಟಿಯಿಂದ ಈ ರೀತಿ ಬಿಟ್ಟುಕೊಡಲು ಹೊರಟಿದ್ದೇವೆ ಎನ್ನತಕ್ಕ ಅಭಿಪ್ರಾಯವನ್ನು ಅವರು ಕೊಡುವುದಾಗಿದ್ದರೆ ಅದನ್ನು ತಪ್ಪಿಸಲು ನಾವು ಈಗಲೂ ಪ್ರಯತ್ನ ಮಾಡೋಣ. ಅದು ಇಡೀ ರಾಷ್ಟ್ರದ ಸ್ವತ್ತು. ಅದು ನಮ್ಮ ಕರ್ನಾಟಕ ರಾಜ್ಯಕ್ಕೆ ಹೆಮ್ಮೆಯನ್ನು ತರತಕ್ಕಂಥ ಅರಣ್ಯ ಪ್ರದೇಶವಾಗಿದೆ. ಅದನ್ನು ರಕ್ಷಣೆ ಮಾಡಬೇಕಾಗಿರತಕ್ಕದ್ದು ನಮ್ಮ ಕರ್ನಾಟಕದ ಪ್ರತಿಯೊಬ್ಬರ ಆದ್ಯ ಕರ್ತವ್ಯ. ಆದರೆ ಅಲ್ಲಿರುವ ನಾಗರೀಕರಿಗೆ ತೊಂದರೆಯಾಗದ ರೀತಿಯಲ್ಲಿ, ಅವರ ಜೀವನಕ್ಕೆ ಆತಂಕವಾಗದ ರೀತಿಯಲ್ಲಿ ನಾವು ಕೆಲವು ಸವಲತ್ತುಗಳನ್ನು ನಿರ್ಮಿಸಿಕೊಳ್ಳಬೇಕು. ಆ ರೀತಿ ಅವರಿಗೆ ತೊಂದರೆಯಾಗದ ರೀತಿಯಲ್ಲಿ ಇವತ್ತು ಈ ನಿರ್ಣಯವನ್ನು ತಂದಿದ್ದಾರೆ. ಆ ದೃಷ್ಟಿಯಿಂದ ನಾವು ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕು. ಜೊತೆಗೆ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಏಕೆಂದರೆ ಅವರು ಇದರ ಬಗ್ಗೆ ಈಗಾಗಲೆ ದೀರ್ಘವಾಗಿ ಮಾತನಾಡಿದ್ದಾರೆ. ಮತ್ತು ಶ್ರೀಪಾನ್ ರಾಣೆಯವರು ಆ ಪ್ರದೇಶದಿಂದ ಬಂದಿರತಕ್ಕವರು.

---

† ಈ ಚಿಹ್ನೆಯು ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿರುವುದಿಲ್ಲ ವೆಂದು ಸೂಚಿಸುತ್ತದೆ.

ಮತ್ತು ಅಲ್ಲಿರತಕ್ಕ ಶಾಸಕರು ನಾವೆಲ್ಲರೂ ಸೇರಿ ಮುಖ್ಯಮಂತ್ರಿಗಳ ಜೊತೆ ಇದರ ಬಗ್ಗೆ ಚರ್ಚೆ ಮಾಡಿ ಈ ತೀರ್ಮಾನಕ್ಕೆ ಬಂದಿದ್ದೇವೆ. ಎಷ್ಟನ್ನು ಬಿಡುಗಡೆ ಮಾಡಿಕೊಳ್ಳಬೇಕು, ಎಷ್ಟನ್ನು ವನ್ಯ ಜೀವಿ ಸಂರಕ್ಷಣೆ ಪ್ರದೇಶದಿಂದ ಬಿಡಿಸಿ ಕೆಲವು ಭಾಗವನ್ನು ಅರಣ್ಯ ಪ್ರದೇಶವಾಗಿ ಇಟ್ಟುಕೊಳ್ಳಬೇಕು ಎನ್ನುವ ಬಗ್ಗೆ ತೀರ್ಮಾನಕ್ಕೆ ಬಂದು ಇದನ್ನು ತಂದಿದ್ದೇವೆ. ಬೇಕಾದರೆ ಅಂತಿಮವಾಗಿ ಇದರ ಬಗ್ಗೆ ತೀರ್ಮಾನ ಮಾಡತಕ್ಕ ಸಮಯದಲ್ಲಿ ಇನ್ನೂ ಪರಿಶೀಲನೆ ಮಾಡಲು ತೀರ್ಮಾನ ಮಾಡಿ, ಆ ಪ್ರದೇಶದ ಜನರಿಗೆ ದಿನನಿತ್ಯ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕಾದಂಥ ಅಗತ್ಯ ತೀವ್ರವಾಗಿದೆ. ಆ ದೃಷ್ಟಿಯಿಂದ ಈ ನಿರ್ಣಯವನ್ನು ಬೆಂಬಲಿಸುತ್ತೇನೆ. ಇದರ ಜೊತೆಗೆ ನಮ್ಮ ಅರಣ್ಯ ಮಂತ್ರಿಗಳ ತಲೆಯಲ್ಲಿ ನಮ್ಮ ಬಗ್ಗೆ ಸಂಶಯ ಬರಬಾರದು. ನಾವೇನೋ ಅರಣ್ಯವನ್ನು ನಾಶಪಡಿಸುತ್ತಿದ್ದೇವೆ, ಯಾರಿಗೋ ಲಾಭವನ್ನು ಮಾಡಿಕೊಡುತ್ತೇವೆ ಎನ್ನತಕ್ಕ ಸಂಶಯ ಅವರಲ್ಲಿ ಬರಬಾರದು. ಅವರನ್ನೂ ಸಹ ಬೇಕಾದರೆ ದಾಂಡೇಲಿಗೆ ಬರಮಾಡಿಕೊಂಡು ಅವರು ಹೇಳತಕ್ಕದ್ದು ಏನು ಇದೆಯೋ ಅದನ್ನು ಕೇಳಿಕೊಂಡು, ಅವರು ಹೇಳತಕ್ಕದ್ದು ನಿಜವಾಗಿದ್ದರೆ ನಾವು ಅದನ್ನು ಕನ್‌ಸೀಡ್ ಮಾಡೋಣ, ಅವರಿಗೂ ಸಹ ಕನ್‌ಸೀಡ್ ಮಾಡೋಣ. ಆದರೆ ಆ ನಾಗರೀಕರ ದೃಷ್ಟಿಯಿಂದ ಅವರ ಎದುರಿಗೆಯೇ ಯಾವ ಪ್ರದೇಶವನ್ನು ಬಿಟ್ಟುಕೊಡಬೇಕು, ಯಾವ ಪ್ರದೇಶದಲ್ಲಿ ತೊಂದರೆಯಾಗಿದೆ ಎನ್ನತಕ್ಕದ್ದನ್ನು ಅವರಿಗೂ ಮನವರಿಕೆ ಮಾಡಿಕೊಡತಕ್ಕ ಕೆಲಸವನ್ನು ನಾವು ಮಾಡಬೇಕು. ಏಕೆಂದರೆ ನನಗೆ ಗೊತ್ತಿದೆ. I have gottigh regard, and great love for that area. That is such a beautiful and wonderful area. Under no circumstances we should succumb to any political pressure. Purely if it is a matter of benefits to local people, that is the only consideration on which we have to take a decision. ಆದುದರಿಂದ ಈಗ ನಿರ್ಣಯವನ್ನು ಪಾಸ್ ಮಾಡೋಣ, ಜೊತೆಗೆ ಇದರ ಬಗ್ಗೆ ಇನ್ನೂ ಸ್ವಲ್ಪ ದೀರ್ಘವಾಗಿ ಚರ್ಚೆ ಮಾಡಿ ಅಂತಿಮವಾಗಿ ತೀರ್ಮಾನ ಮಾಡುವ ಸಮಯದಲ್ಲಿ ಏಕೆಂದರೆ ಈ ಸದನದಲ್ಲಿ ಒಂದು ನಿರ್ಣಯದ ಬಗ್ಗೆ ಬದಲಾವಣೆ ಮಾಡಿಕೊಳ್ಳುವುದಾದರೆ ಯಾವಾಗ ಬೇಕಾದರೂ ಮಾಡಿಕೊಳ್ಳಲು ಅವಕಾಶವಿದೆ. ಇದನ್ನು ಸ್ವಲ್ಪ ಮನಸ್ಸಿನಲ್ಲಿ ಇಟ್ಟುಕೊಳ್ಳೋಣ. ಅಂಥ ಅಪರೂಪವಾದಂಥ, ವಸ್ತುವನ್ನು, ಪ್ರದೇಶವನ್ನು ಉಳಿಸಿಕೊಳ್ಳುವ ಆಸೆ ಮತ್ತು ಅಪೇಕ್ಷೆಯನ್ನು ನಾವು ಇಟ್ಟುಕೊಳ್ಳೋಣ. ಶ್ರೀಮಾನ್ ರಾಣೆಯವರಿಗೆ ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ. ಇದರ ಬಗ್ಗೆ ಟೀಕೆ ಮಾಡುವವರು ಯಾರಿದ್ದಾರೆ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಮುಂದೆ ಅಂತಿಮವಾದ ತೀರ್ಮಾನವನ್ನು ತೆಗೆದುಕೊಳ್ಳಿ. ಸಧ್ಯಕ್ಕೆ ಸದನದಲ್ಲಿ ಈ ನಿರ್ಣಯಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಸೂಚಿಸಿ ಈ ನಿರ್ಣಯವನ್ನು ಬೆಂಬಲಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :—

"ಕರ್ನಾಟಕ ಸರ್ಕಾರವು ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, ೧೯೭೨ ರ (೧೯೭೨ ರ ಕೆ ೦ದ್ರ ಅಧಿನಿಯಮ ೫೩) ೨೫ನೆ ಪ್ರಕರಣದ (೩) ನೇ ಉಪ–ಪ್ರಕರಣದಡಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಹೊರಡಿಸಲು ಉದ್ದೇಶಿಸಿರುವ ಈ ಕೆಳಗಿನ ಕರಡು ಅಧಿಸೂಚನೆಯನ್ನು ಸದನವು ಈ ಮೂಲಕ ಅನುಮೋದಿಸಲು ನಿರ್ಣಯಿಸಿದೆ.

"ಅಧಿಸೂಚನೆ"

ಕರ್ನಾಟಕ ಸರ್ಕಾರವು ದಿನಾಂಕ ೩೧ನೇ ಆಗಸ್ಟ್ ೧೯೮೬ನೇ ಸೆಪ್ಟೆಂಬರ್ ೮೭ ರ ಅಧಿಸೂಚನೆ ಸಂಖ್ಯೆ ಎಸ್‌ಎಸ್‌ಡಿ ೧೩೦ ಎಸ್‌ಜಬ್ಲ್ಯೂಎಲ್ ೮೧ ರಲ್ಲಿ, ಅನುಸೂಚಿಯಲ್ಲಿ ೮೩, ೪೧೫, ೭೧೨ ಹೆಕ್ಟೇರುಗಳು ಅಥವಾ ೮೩೪, ೧೫೭ ಚದರ ಕಿಲೋಮೀಟರುಗಳ ವಿಸ್ತೀರ್ಣವೆಂದಾಗಿ ನಿರ್ದಿಷ್ಟಪಡಿಸಿರುವ ಸ್ಥಳ ಮತ್ತು ಪರಿಮಿತಿಗಳನ್ನು ಹೊಂದಿರುವ ಪ್ರದೇಶವನ್ನು "ದಾಂಡೇಲಿ ವನ್ಯಜೀವಿ ಅಭಯಾರಣ್ಯ" ಎಂಬುದಾಗಿ ಘೋಷಿಸಿರುವುದರಿಂದ,

ಮತ್ತು ಕಾಳೀ ಜಲವಿದ್ಯುತ್ ಯೋಜನೆ, ಗಣಿ ಕೈಗಾರಿಕೆಗಳು, ಅಂಬಿಕಾ ನಗರ ಎಂಬ ಹೊಸ ಪಟ್ಟಣ ಮತ್ತು ಪವರ್ ಹೌಸ್ ನಿರ್ಮಾಣಗಳು, ಸೂಪಾ ತಾಲ್ಲೂಕಿನ ಮುಳುಗಡೆ, ಜಾಯಿಪಾನಲ್ಲಿ ಹೊಸ ತಾಲ್ಲೂಕು ಕೇಂದ್ರ ಸ್ಥಾನದ ಸ್ಥಾಪನೆ ಮತ್ತು ಘೋಷಿತ ಅಭಯಾರಣ್ಯ ಪರಿಮಿತಿಗಳೊಳಗೆ ವಿಸ್ತರಿಸಿರುವ ದೊಡ್ಡ ಪ್ರಮಾಣದ ವಾಸ ಸ್ಥಳ—ಇವುಗಳ ಕಾರಣದಿಂದಾಗಿ ಉಂಟಾದ ತೊಂದರೆಗಳ ದೃಷ್ಟಿಯಿಂದ ದಾಂಡೇಲಿ ವನ್ಯಜೀವಿ ಅಭಯಾರಣ್ಯದ ಪರಿಧಿಯಗಳನ್ನು ಮತ್ತು ಸರಹದ್ದುಗಳನ್ನು

ಬದಲಾಯಿಸುವುದನ್ನು ಅವಶ್ಯಕವೆಂದು ಕರ್ನಾಟಕ ಸರ್ಕಾರ ಪರಿಗಣಿಸಿರುವುದರಿಂದ ಮತ್ತು ವನ್ಯಜೀವಿ ಅಥವಾ ಅದರ ಪರಿಸರವನ್ನು ಸಂರಕ್ಷಿಸುವ, ಸಂತಾನಾಭಿವೃದ್ಧಿ ಮಾಡುವ ಅಥವಾ ಬೆಳೆಸುವ ಉದ್ದೇಶ ಕ್ಕಾಗಿ ಜೀವಿ ಪರಿಸರ ಶಾಸ್ತ್ರ, ಪ್ರಾಣಿವರ್ಗ, ಸಸ್ಯವರ್ಗ, ಭೂ ಆಕೃತಿ ರಚನಾ ಶಾಸ್ತ್ರ, ನೈಸರ್ಗಿಕ ಅಥವಾ ಪ್ರಾಣಿ ಶಾಸ್ತ್ರದ ದೃಷ್ಟಿಯಿಂದ ಸಾಕಷ್ಟು ಮಹತ್ವವುಳ್ಳಂಥ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಸ್ಥಳ ಮತ್ತು ಪರಿಮಿತಿಗಳನ್ನು ಹೊಂದಿರುವ ಪ್ರದೇಶವನ್ನು ಅಭಯಾರಣ್ಯ ವೆಂದು ಬದಲಾಯಿಸಿ ಘೋಷಿಸುವುದು ಅಪೇಕ್ಷಣೀಯವೆಂದು ಕಂಡುಬಂದಿರುವುದರಿಂದ.

ಈಗ, ವನ್ಯಜೀವಿ (ಸಂರಕ್ಷಣಾ) ಅಧಿನಿಯಮ, ೧೯೭೨ ರ (೧೯೭೨ ರ ಕೇಂದ್ರ ಅಧಿನಿಯಮ ೫೩) ೨೫ಎ ಪ್ರಕರಣದ (೩) ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಸ್ಥಳ ಮತ್ತು ಪರಿಮಿತಿ ವಿಸ್ತೀರ್ಣವನ್ನು ಹೊಂದಿರುವ ಪ್ರದೇಶವನ್ನು "ದಾಂಡೇಲಿ ವನ್ಯಜೀವಿ ಅಭಯಾರಣ್ಯ" ವೆಂದು ಈ ಮೂಲಕ ಬದಲಾಯಿಸಿ ಘೋಷಿಸಿದೆ.

ಅನುಸೂಚಿ

ಜಿಲ್ಲೆಯ ಹೆಸರು : ಉತ್ತರ ಕನ್ನಡ.

ಪ್ರದೇಶ ; ೪೭೫೧.೮೫ ಹೆಕ್ಟೇರುಗಳು ಅಥವಾ ೪೭೫೧.೧೮ ಚದರ ಕಿಲೋಮೀಟರುಗಳು.

ಸರಹದ್ದಿನ ವಿವರಣೆ

ಉತ್ತರ : ಇದರ ಸರಹದ್ದು, ಅನ್‌ಮೋಡ್, ಅನ್‌ಷಿ ಮತ್ತು ಉಳವಿ ಅರಣ್ಯಗಳ ಕಾರ್ಯ ಯೋಜನೆಯ X ಮತ್ತು XII ವಿಭಾಗ ಸಂಖ್ಯೆಗಳ ಕೂಡು ಜಾಗದಲ್ಲಿ ಗೋವಾ ರಾಜ್ಯ ಸರಹದ್ದಿನಿಂದ ಪ್ರಾರಂಭವಾಗಿ, ಪೂರ್ವದ ಕಡೆಗೆ ತಿರುಗಿ, ಆನ್‌ಮೋಡ್, ಆನ್‌ಷಿ ಮತ್ತು ಉಳವಿ ಅರಣ್ಯಗಳ ಸಾಮಾನ್ಯ ವಿಭಾಗ ಸರಹದ್ದಿನ X, XI ಮತ್ತು XII, XIII ವಿಭಾಗಗಳುದ್ದಕ್ಕೂ ಸಾಗಿ ಸಾಮಾನ್ಯ ಸರಹದ್ದಿನ ೧೭, ೧೮, ೧೪, ೧೩ಎ, ೧೩ಬಿ ಮತ್ತು ೧೯ನೇ ಉಪ-ವಿಭಾಗಗಳುದ್ದಕ್ಕೂ ಹೋಗುತ್ತದೆ. ಆನಂತರ ಹಳಿಯಾಳ ಮಹಾರಣ್ಯಗಳ ವಿಭಾಗ ಸರಹದ್ದಿನ I ವಿಭಾಗದುದ್ದಕ್ಕೂ ಸಾಗಿ, ಮುಂದೆ ಸಾಮಾನ್ಯ ಸರಹದ್ದಿನ ೧೯, ೨೧ ಮತ್ತು ೧೫ನೇ ಭಾಗದುದ್ದಕ್ಕೂ ಹೋಗುತ್ತದೆ. ಇಲ್ಲಿಂದ ಮುಂದೆ ಸರಹದ್ದು ಉತ್ತರ ದಿಕ್ಕಿನೆಡೆ ತಿರುಗಿ ಜಿಲ್ಲಾ-ಹಟ್ಟೋಳಿ ರಸ್ತೆಯುದ್ದಕ್ಕೂ ಸಾಗಿ, ಪಟ್ಟೋಳಿ ಸಮೀಪದ ಕೂಡು ರಸ್ತೆಯವರೆಗೆ ಬಂದು, ಮುಂದೆ ವಿಠನೋಳಿ ಮತ್ತು ಕಾಳಿಗಿಯ ಮೂಲಕ ಪಟ್ಟೋಳಿ-ಬೊಮ್ಮನಹಳ್ಳಿ ರಸ್ತೆಯುದ್ದಕ್ಕೂ ಸಾಗಿ, ಕಾಳೀ ನದಿಯ ಒಡ್ಡು ದಾರಿಯವರೆಗೆ ಬಂದು, ಬೊಮ್ಮನಹಳ್ಳಿಯ ಸಮೀಪ ಕಾಳೀ ನದಿಯನ್ನು ಹಾದು ಹೋಗುತ್ತದೆ.

ಪೂರ್ವ : ಆನಂತರ ಸರಹದ್ದು ಕಾಳೀ ನದಿಯ ಜಲದಂಡೆಯ ಕೆಳ-ಪ್ರವಾಹದುದ್ದಕ್ಕೂ ಸಾಗಿ, ತಟ್ಟಿಹಳ್ಳ ನಾಲೆಯು ಕಾಳೀ ನದಿಯನ್ನು ಕೂಡುವ ಜಾಗದವರೆಗೆ ಬಂದು, ಅಲ್ಲಿಂದ ಮುಂದೆ ಉಕ್ಕೈಹಳ್ಳವು ಕಾಳೀ ನದಿಯನ್ನು ಸೇರುವ ಜಾಗದಲ್ಲಿರುವ ಮಳಗೇರಿ ಗ್ರಾಮದ ಸಮೀಪದ ಫಾರೆಸ್ಟ್ ಸರಹದ್ದಿನ (ಕಾಳೀ ನದಿಯ ಕೆಳ ಪ್ರವಾಹದುದ್ದಕ್ಕೂ ಸಹ) ಸಾಗುತ್ತದೆ.

ದಕ್ಷಿಣ : ಉಕ್ಕೈಹಳ್ಳವು ಎಲ್ಲಿ ಕಾಳೀ ನದಿಯನ್ನು ಸೇರುತ್ತದೋ ಅಲ್ಲಿಂದ ಸರಹದ್ದು ಪ್ರಾರಂಭವಾಗಿ, ಉಕ್ಕೈಹಳ್ಳ ಮೇಲು ಪ್ರವಾಹದುದ್ದಕ್ಕೂ ಸಾಗಿ, ಕಡತಹಳ್ಳಿ ಗ್ರಾಮದ ರಸ್ತೆಯು ಉಕ್ಕೈಹಳ್ಳವನ್ನು ದಾಟುವ ಜಾಗದವರೆಗೆ ಸಾಗಿ, ಸುಳಗೇರಿ ಕಡತಹಳ್ಳಿ ಗ್ರಾಮದ ರಸ್ತೆಯುದ್ದಕ್ಕೂ ಸಾಗಿ ಉಳವಿ ಗ್ರಾಮದವರೆಗೆ ಬರುತ್ತದೆ. ಆನಂತರ ಸರಹದ್ದು ಉಳವಿ-ಕುಂಬಾರವಾಡ ರಸ್ತೆಯುದ್ದಕ್ಕೂ ಸಾಗಿ, ಮುಂದೆ ಕನೇರಿ ನದಿ ಹರಿಯುವ ಜಾಗದವರೆಗೆ ಬಂದು, ಕಾವೇರಿ ನದಿಯ ಮೇಲು ಪ್ರವಾಹದುದ್ದಕ್ಕೂ ಸಾಗುತ್ತದೆ. ಅಲ್ಲಿಂದ ಮುಂದೆ ಇದು ಕುಂಬಾರವಾಡ-ಕಾರವಾರ ರಸ್ತೆಗೆ ಸೇರಿ, ಅಲ್ಲಿಂದ ಹುಂಬಿ ಕುಡಾಳ ಗ್ರಾಮದುದ್ದಕ್ಕೂ ಸಾಗಿ ಗೋವಾ ರಾಜ್ಯದ ಸರಹದ್ದಿನವರೆಗೆ ಹೋಗುತ್ತದೆ.

ಪಶ್ಚಿಮ ; ಸರಹದ್ದು, ಗೋವಾ ರಾಜ್ಯದ ಸರಹದ್ದಿನುದ್ದಕ್ಕೂ ಸಾಗಿ ಪ್ರಾರಂಭದ ಜಾಗದವರೆಗೆ ಸಾಗುತ್ತದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಅನುಸೂಚಿ

ಕ್ರಮ ಸಂಖ್ಯೆ	ಅರಣ್ಯಗಳ ಹೆಸರು	ವಿಭಾಗ ಸಂಖ್ಯೆ	ಭಾಗ ಸಂಖ್ಯೆ ಉಪ ವಿಭಾಗ ಸಂಖ್ಯೆ	ಪ್ರದೇಶ ಹೆಕ್ಟೇರುಗಳಲ್ಲಿ (ಮೀ.ಅ ಮಾತ್ರ)	ಸೇರಿಸ ಲಾದವುಗಳ ಹೆಸರು	ಹೆಕ್ಟೇರು ಗಳಲ್ಲಿ ಪ್ರದೇಶ	ಅಭಯಾರಣ್ಯದಲ್ಲಿ ಸೇರಿಸಲಾದ ಪ್ರದೇಶ ಹೆಕ್ಟೇರುಗಳಲ್ಲಿ
೧	೨	೩	೪	೫	೬	೭	೮
೧.	ಆನ್‌ಮೋಡ್. ಅನ್‌ಷಿ	XII	—	೩೪೯೬.೫೬	—	—	೩೪೯೬.೫೬
	ಮತ್ತು ಉಳಿವಿ ಅರಣ್ಯಗಳು	X1I1	—	೨೫೫೨.೦೦	—	—	೨೫೫೨.೦೦
		X1X	೧,ಎ,ಬಿ,ಸಿ ೨,ಎ,ಬಿ,	೧೮೨೪.೩೬	—	—	೧೮೨೪.೩೬
		XX	೧.ಎ,ಬಿ,ಸಿ ೨ಬಿ(ಆರ್ಧ) ೩ಎ(ಆರ್ಧ) ಬಿ,ಸಿಮತ್ತು ಡಿ	೨೪೭೬,೩೩	—	—	೨೪೭೬.೩೩
೨,	ಸೂಪಾ–ಜೋಯಿದಾ ಅರಣ್ಯಗಳು	—	೯ಎ(ಆರ್ಧ) ೯ಬಿ,೧ಎ ೧೩ಎ.ಮತ್ತು ಬಿ ೧೫(ಆರ್ಧ) ಮತ್ತು ೧೭	೯೪೬೪.೯೫	—	—	೯೪೬೪.೯೫

		(ಉಪ ವಿಭಾಗ)				
೩. ಹಳಿಯಾಳ ಮಹಾರಣ್ಯಗಳ ವಿಭಾಗಗಳು	1	೧ ರಿಂದ ೧೦, ೧೧ (ಅರ್ಧ) ೧೩.೧೪ ಮತ್ತು ೨೦ ರಿಂದ ೨೪	—	—	—	—
	II	೧ ರಿಂದ೧೦ ೧೫ ರಿಂದ ೨೧	೧೩೮೧೧.೪೯	ಶಿರೋಲಿ ಪಂತ್ಯ ಸಣ್ಣಮಗ ಪರ್ಯೋಲಿ ಅಂಬಿಕಾ ನಗರ ಕಾಲೋನಿ	೨೨೬.೮೨ ೪೨೮.೦೫ ೭೭.೭೦ ೭೩೩.೩೭	೧೩೦೭೮.೧೨
	IV	೨೩ ರಿಂದ ೨೪ ೧ ರಿಂದ ೨೯				
೪. ಗೊಂಡ ಅರಣ್ಯ	X	೧ ರಿಂದ ೨೬	೮೪೮೯.೧೧	—	—	೮೪೮೯.೧೧
೫ ನಾಗಜಾರಿ ಅರಣ್ಯಗಳು	X1	೧ ರಿಂದ ೧೫	೩೩೫೧.೭೬	ಪವರ್‌ಹೌಸ್ ಮತ್ತು ಸರ್ಜ್ ಟ್ಯಾಂಕ್	೨೮.೦೦	೩೩೨೩.೭೬
೬. ಕಾಳೀನದಿ ಇಳಿಜಾರು ನೆಲ ವಿಭಾಗಗಳು	XXX1	೧೯ (ಅರ್ಧ) ೨೦ ರಿಂದ ೩೩	೨೭೯೬.೬೪	—	—	೨೭೯೬.೬೪
			೪೮,೨೬೩.೨೦		೭೬೧.೩೭	೪೭೫೦೧.೮೩

ಹೆಕ್ಟೇರುಗಳು ಅಥವಾ
೪೭೫.೦೧೪
ಚದರ ಕಿ.ಮಿ.ಗಳು